ಕ್ರಮಕೈಗೊಳ್ಳಲಾಗುವುದೇ?

ಉತ್ತರ

ಅ) ಇಲ್ಲ.

ಆ) ಸದ್ಯಕ್ಕೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಚಿಕ್ಕ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 406(408)

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು : ಶ್ರೀ ಎಸ್.ಆರ್.ಕಾಶಪ್ಪನವರ್(ಸಣ್ಣ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಎಷ್ಟು ಚಿಕ್ಕ ಉದ್ದಿಮೆಗಳು ಇರುತ್ತವೆ? ಜಿಲ್ಲಾವಾರು ಮಾಹಿತಿ ನೀಡುವುದು?

ಆ) ಎಷ್ಟು ಚಿಕ್ಕ ಉದ್ದಿಮೆಗಳು ಈಗ ಸ್ಥಗಿತಗೊಂಡಿರುತ್ತವೆ ಹಾಗೂ ಅವುಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವ ವಿಶೇಷ ಕ್ರಮಗಳನ್ನು ಕೈಗೊಂಡಿದೆ?

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಚಿಕ್ಕ ಉದ್ದಿಮೆಗಳು ಇರುತ್ತವೆ ಹಾಗೂ ಸ್ಥಗಿತಗೊಂಡಿರುವುವು ಯಾವುವು? (ತಾಲ್ಲೂಕುವಾರು ವಿವರ ನೀಡುವುದು)?

ಉತ್ತರ

ಅ) ರಾಜ್ಯದಲ್ಲಿ ದಿನಾಂಕ:31-12-2001ರಲ್ಲಿದ್ದಂತೆ 2,79,485 ಚಿಕ್ಕ ಉದ್ದಿಮೆಗಳಿರುತ್ತವೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) ಟೆಕ್ಸಾಕ್ ಸಂಸ್ಥೆಯ 1998ರ ಮಾದರಿ ಸಮೀಕ್ಷಾ ವರದಿ ಪ್ರಕಾರ ಶೇ.28.95ರಷ್ಟು ಘಟಕಗಳು ಸ್ಥಗಿತವಾಗಿರುವುದು ತಿಳಿದು ಬಂದಿದೆ. ಸ್ಥಗಿತಗೊಂಡಿರುವ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಯಾವುದೇ ವಿಶೇಷ ಕಾರ್ಯಕ್ರಮಗಳು ಇರುವುದಿಲ್ಲ. ಆದರೆ ರೋಗಗ್ರಸ್ಥ ಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ಹೊಸ ಕೈಗಾರಿಕಾ ನೀತಿಯಲ್ಲಿ

ಅನೇಕ ಸವಲತ್ತುಗಳನ್ನು ನೀಡಲಾಗಿದೆ.

ಇ) ಬೆಳಗಾವಿ ಜಿಲ್ಲೆಯಲ್ಲಿ ದಿನಾಂಕ:31-12-2001ರಲ್ಲಿದ್ದಂತೆ 25,945 ಚಿಕ್ಕ ಕೈಗಾರಿಕೆಗಳು ಸ್ಥಾಪನೆಯಾಗಿರುತ್ತದೆ. ಟೆಕ್ಸಾಕ್ ಮಾದರಿ ಸಮೀಕ್ಷೆ ವರದಿಯಂತೆ ಶೇಕಡ 29.7 ಘಟಕಗಳು ಅಂದರೆ 7705 ಘಟಕಗಳು ಮುಚ್ಚಲ್ಪಟ್ಟಿವೆ.(ತಾಲ್ಲೂಕುವಾರು ಮಾಹಿತಿ ಇರುವುದಿಲ್ಲ)

ಸಕ್ಕರೆ ನಿರ್ದೇಶನಾಲಯ ಕಛೇರಿಯನ್ನು ಸ್ಥಳಾಂತರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 407(409)

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಪ್ರಶ್ನೆ

ಅ. ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇರುತ್ತವೆ? ಜಿಲ್ಲಾವಾರು ಮಾಹಿತಿ ನೀಡುವುದು?

ಆ. ಉತ್ತರ ಕರ್ನಾಟಕದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಹಳೆಯ ಮೈಸೂರು ಭಾಗದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇರುತ್ತವೆ?

ಇ. ಬೆಳಗಾವಿಯಲ್ಲಿ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರ ಎಂದು ಆದೇಶವನ್ನು ಹೊರಡಿಸಿತು? ಸರ್ಕಾರದ ಆಜ್ಞೆ ಅನುಷ್ಠಾನಕ್ಕೆ ಬಂದಿದೆಯೇ? ಹಾಗೂ ಎಂದಿನಿಂದ ಈ ಕಛೇರಿ ಕೆಲಸವನ್ನು ನಿರ್ವಹಿಸುತ್ತಿದೆ?

ಈ. ಈ ಕಛೇರಿಯು ಯಾರಿಂದ, ಎಲ್ಲಿ ಮತ್ತು ಯಾವಾಗ ಉದ್ಘಾಟಿಸಲ್ಪಟ್ಟಿತ್ತು?

ಉ. ಕಛೇರಿಯು ಬೆಳಗಾವಿಯಲ್ಲಿ ಉದ್ಘಾಟನೆಯಾಗಲ್ಪಟ್ಟಿದ್ದರೂ ಕೂಡ ಇದುವರೆಗೂ ಕೆಲಸ ಮಾಡದೇ ಇರುವ ಸಂಗತಿ ನಿಜವೇ?

ಊ. ಉತ್ತರ ಕರ್ನಾಟಕದ ಬಗ್ಗೆ ನಿರ್ಲಕ್ಷ್ಯ ಮನೋಭಾವನೆ ಹೊಂದಿರುವ ಬೆಂಗಳೂರು ವ್ಯಾಮೋಹಿ ಕೆಲವು ಐ.ಎ.ಎಸ್. ಅಧಿಕಾರಿಗಳ ಅಸೂಯೆ ಭಾವನೆಯಿಂದ ಇಲ್ಲಿ ಆರಂಭಗೊಂಡಿರುವ ಸಕ್ಕರೆ ನಿರ್ದೇಶನಾಲಯದ ಕಛೇರಿಯನ್ನು ಇಲ್ಲಿ ಕೆಲಸ